ಕೂರಿಸಬೇಕಿತ್ತು ನಿನ್ನ. ಸ್ವಾತಂತ್ರ್ಯ ಕೊಟ್ಟು ತಪ್ಪು ಮಾಡ್ದೆ'.

'ಅಪ್ಪಾ...'

'ನೀನು ಅಪ್ಪಾ ಅಂತ ನನ್ನ ಕರೀಬೇಕಾದ್ರೆ ನಾನು ಹೇಳಿದ ಮಾತಿಗೆ ಬೆಲೆ ಕೊಡ್ಬೇಕು. ಇಲ್ದಿದ್ರೆ ನಾನು ಅಪ್ಪಾನೂ ಅಲ್ಲ, ನೀನು ಮಗಳೂ ಅಲ್ಲ...'

ಅಪ್ಪ ಇಷ್ಟು ಕಠೋರವಾಗಿ ಮಾತಾಡಬಲ್ಲರೆಂದು ಕನಸಲ್ಲೂ ಕಲ್ಪಿಸಿಕೊಂಡಿರಲಿಲ್ಲ ಭಾಮ. ಅಪ್ಪನ ಕಾಲು ಬೇಕಾದರೂ ಹಿಡಿದು ಈ ಮದುವೆಗೆ ಒಪ್ಪಿಸುತ್ತೇನೆಂಬ ಅವಳ ಆತ್ಮವಿಶ್ವಾಸ ಕುಸಿದು ಹೋಯ್ತು.

'ಹಾಗನ್ಬೇಡ ಅಪ್ಪಾ, ಪ್ಲೀಸ್...' ಅನ್ನುವಷ್ಟರಲ್ಲಿ ದುಃಖ ಉಕ್ಕಿ ಬಂತು. ಚಿದಾನಂದನಿಗೂ ಕೆಡುಕೆನಿಸಿರಬೇಕು.

'ನನ್ನ ಮಾತು ಕೇಳು ಕಂದಾ. ಅಮ್ಮ ಇಲ್ಲದ ಮಗಳು ಬೇಕಾಬಿಟ್ಟಿ ಬೆಳೆದಿದಾಳೆ ಅಂತ ಜನ ಮಾತಾಡೋ ಹಾಗಾಗ್ಬಾರ್ದು. ಪ್ರಾಯದಲ್ಲಿ ಇಂಥಾದ್ದು ಬೇಕಾದಷ್ಟು ನಡೆದಿರುತ್ತೆ. ಎಲ್ಲಾ ಹುಡುಗಾಟ ಮರೆತು ದೊಡ್ಡೋರು ಹೇಳಿದೋರನ್ನ ಮದುವೆಯಾಗಿ ಸುಖವಾಗಿ ಸಂಸಾರ ಮಾಡ್ಕೊಂಡಿರೋರು ಎಷ್ಟು ಜನ ಇರಲ್ಲ? ಪ್ರೀತಿ ಗೀತಿ ಅನ್ನೋದೆಲ್ಲಾ ಒಂದು ವಯಸ್ಸಿನ ಹುಚ್ಚು. ಪ್ರಾಯದ ಭ್ರಮೆ. ದಾರಿ ತಪ್ಪಿಸುವಂತಾದ್ದು...'

'ಅಪ್ಪಾ'

ಸಾಕು ಈ ಮಾತು ಎನ್ನುವಂತೆ ಚಿದಾನಂದ ಕೈ ಅಡ್ಡ ಹಿಡಿದ.

'ನಿನ್ನ ಭವಿಷ್ಯ ರೂಪಿಸೋ ಕೆಲಸ ನಂಗೆ ಬಿಟ್ಟಿಡು. ನೀನು ಇಷ್ಟು ಓದಿದ್ದು ಸಾಕೇ ಸಾಕು. ನಾನು ತಕ್ಕ ಗಂಡು ಹುಡುಕಿ ಮದುವೆ ಮಾಡೋವರೆಗೆ ಮನೇಲಿರು.'

'ಅಪ್ಪಾ...'

ಚಿದಾನಂದ ಕಾಫಿ ಕುಡಿದ ಲೋಟವನ್ನು ಠಣ್ಣನೆ ನೆಲದ ಮೇಲಿಟ್ಟು ಅಲ್ಲಿಂದ ಎದ್ದು ಹೊರಗಡೆ ಹೋದ. ಅಂದರೆ? ತನಗೆ ಗೃಹಬಂಧನ? ಹುಡುಗಿ ಹತಾಶಳಾಗಿ ತನ್ನೊಳಗೇ ಹೇಳಿಕೊಂಡಳು.

* * *

'ಮನೇಲಿರು' ಎಂದು ಚಿದಾನಂದ ಕಟ್ಟುನಿಟ್ಟಾಗಿ ಹೇಳಿದ್ದರೂ ಭಾಮ ವೆಂಕಟೇಶನನ್ನು ಭೇಟಿಯಾಗದೆ ಸುಮ್ಮನುಳಿಯಲಿಲ್ಲ. ಅವನು ಊರಿಗೆ ಹೊರಟು ಬಿಡುತ್ತಾನೆಂಬ ಆತಂಕದಲ್ಲಿ ಭಾಮ ಅವನಿದ್ದ ರೂಮಿಗೇ ಹೋಗಿ ಅವನನ್ನು ಭೇಟಿಯಾಗುವ ಧೈರ್ಯ ಮಾಡಿದಳು. ಅವನ ಜೊತೆಗಾರ ಪರೀಕ್ಷೆ ಮುಗಿಯುತ್ತಿದ್ದಂತೆ ಊರಿಗೆ ಹೊರಟು ಹೋಗಿದ್ದ. ವೆಂಕಟೇಶನೂ ಹೊರಡಬಹುದಿತ್ತು. ಅವನಿಗೆ ಇಲ್ಲಿ ಅಂಥ ರಾಜಕಾರ್ಯವೇನಿರಲಿಲ್ಲ. ಅಥವಾ ಇತ್ತೇ? ಅಪ್ಪನೊಡನೆ ಮಾತಾಡುತ್ತೇನೆಂದು ಹೇಳಿದ್ದಳು ಭಾಮ. ಅದರ ಪರಿಣಾಮದ ಕುರಿತು ಅವನಿಗೆ ಆತಂಕ. ಒಂದೊಮ್ಮೆ ಇಲ್ಲಿಯ ಪ್ರಕರಣ ಸುಖಾಂತವಾದರೆ ಮನೆಯಲ್ಲಿ ಈ ಕುರಿತಾಗಿ ಮಾತಾಡಲು ಒಂದು ಆಧಾರ ಸಿಗುತ್ತದೆ ಎಂದು ಅವನ ಒಳಮನಸ್ಸು ಹೇಳುತ್ತಾ ಸದ್ಯದ ಮಟ್ಟಿಗೆ ಅವನನ್ನು ಇಲ್ಲಿಯೇ ಕಟ್ಟಿ ಹಾಕಿತ್ತು. ಅವನ ನಿರೀಕ್ಷೆ ಸುಳ್ಳಾಗಲಿಲ್ಲ. ಒಂದು ಮಟಮಟ ಮಧ್ಯಾಹ್ನ ಭಾಮ ಅವನನ್ನು ಹುಡುಕಿಕೊಂಡು ಬಂದೇ ಬಂದಳು. ಬಾಗಿಲಲ್ಲಿ ನಿಂತ ಅವಳನ್ನು ಕಂಡು ವೆಂಕಟೇಶನಿಗೆ ದಿಗ್ಭ್ರಮೆ. ಹೀಗೆ ರೂಮಿನ ಬಾಗಿಲಲ್ಲಿ ಅವಳು ಧುತ್ತನೆ ಪ್ರತ್ಯಕ್ಷಳಾಗಬಹುದೆಂದು ಅವನು ಎಣಿಸಿರಲಿಲ್ಲ. ಭೇಟಿಗೆ ಇನ್ನೇನೋ ವ್ಯವಸ್ಥೆಯಾಗಬಹುದೆಂದು ಅವನ ಊಹೆ. ಎಲ್ಲಿ? ಹೇಗೆ? ಎನ್ನುವ ಕುರಿತು ನಿಖರ ಮಾತುಕತೆ ನಡೆದಿರಲಿಲ್ಲವಾದರೂ ಒಬ್ಬರಿನ್ನೊಬ್ಬರ ವಿಳಾಸ ಹಂಚಿಕೊಂಡಿದ್ದರಿಂದ ಸಮಾಧಾನ. ಅತ್ತಿತ್ತ ನೋಡುತ್ತಾ ಅವಳ ಕೈಹಿಡಿದು ಒಳಗೆಳೆದುಕೊಂಡು ಸರ್ರನೆ ಬಾಗಿಲು ಮುಚ್ಚಿದ ವೆಂಕಟೇಶ.

'ಯಾರಾದ್ರೂ ನೋಡಿದ್ರೆ ಏನು ಗತೀನೇ? ಕೆಳಗಿನ ಮನೇಲಿ ಓನರ್ ಇರೋದು ಗೊತ್ತಿಲ್ವಾ?' ದಡಬಡಿಸುವ ಹೃದಯದ ಮೇಲೆ ಕೈಯಿಟ್ಟುಕೊಂಡು ಕೇಳಿದ.

'ನೋಡಿದ್ರೆ ನೋಡ್ಲಿ. ಏನಾಗುತ್ತೆ?'

'ಏನು ಆಗಲ್ಲ? ಒಬ್ಬ ಹುಡುಗಿ ಒಬ್ಬ ಹುಡುಗನ್ನ ಹುಡುಕ್ಕೊಂಡು ಬರೋದು ಅಂದ್ರೆ.'

'ಇನ್ನೆಷ್ಟು ದಿನ? ಆದಷ್ಟು ಬೇಗ ಮದುವೆ ಮಾಡ್ಕೊಂಡ್ಬಿಡೋಣ'.

ವೆಂಕಟೇಶನ ಮುಖ ಅರಳಿತು.

'ಹಾಗಿದ್ರೆ ನಿಮ್ಮಪ್ಪ ಒಪ್ಪಿಬಿಟ್ರಾ? ಪರ್ವಾಗಿಲ್ಲ...'

'ಅವರು ಒಪ್ಲಿಲ್ಲ ಅಂತಾನೇ ನಿನ್ನನ್ನ ಹುಡುಕ್ಕೊಂಡು ಬಂದಿದ್ದು...'

ಅರಳಿದ ಮುಖ ಕಪ್ಪಿಟ್ಟಿತು.

'ಹೌದಾ? ಹೀಗಾಗುತ್ತೇಂತ ಅನುಮಾನ ಇತ್ತು ನಂಗೆ...'

'.........'

'ಏನು ಮಾಡೋದು ಈಗ? ಇನ್ನು ನಮ್ಮನೇಲಿ ಏನೇನು ರಾಮಾಯಣ ಆಗುತ್ತೋ?'

'ಏನಾದ್ರೂ ಆಗ್ಲಿ. ನಮ್ಮ ನಿರ್ಧಾರ ಬದಲಾಗಬಾರ್ದು...'

'ಹೆದರಿಕೆಯಾಗುತ್ತೆ ನಂಗೆ. ಮದುವೆ ಅಂದ್ರೆ ತಮಾಷೇನಾ? ದೊಡ್ಡ ಜವಾಬ್ದಾರಿ...'

'ಈ ಮಾತು ಮೊದಲೇ ಆಡಿದ್ದಿ. ಜವಾಬ್ದಾರಿ ಹೊರೋಕೆ ಸಿದ್ಧ ಇಲ್ದಿದ್ರೆ ಪ್ರೀತಿ ಮಾಡಿದ್ದು ಯಾಕೆ? ಪುಗಸಟ್ಟೆ ಒಬ್ಳು ಹುಡುಗಿ ಸಿಕ್ಕಿದ್ಲು ಅಂತಾನಾ?'

'ಬೇಡ್ವೇ, ಅಂಥಾ ಮಾತಾಡಿ ನನ್ನ ಕೊಲ್ಬೇಡ...'

'ಮತ್ತೇನು ಮಾಡೋದು ಈಗ?'

'ಇನ್ನೆರಡು ವರ್ಷ ಕಳೀಲಿ. ಒಂದು ಕೆಲಸ ಹುಡುಕ್ಕೊಂಡು'

'ಅಷ್ಟೊತ್ತಿಗೆ ಅಪ್ಪ ನನ್ನ ಮದುವೆ ಮಾಡಿಬಿಟ್ಟಿರ್ತಾರೆ. ನಿನ್ನನ್ನ ನಂಬಿ ನಾನು ಕೆಟ್ಟೆ ಅನ್ನಿಸ್ತಿದೆ'.

ಅವಳು ಕೆಳಗೆ ಸುರುಳಿ ಸುತ್ತಿಟ್ಟಿದ್ದ ಹಾಸಿಗೆಯ ಮೇಲೆ ಧೊಪ್ಪನೆ ಕೂತು ಮಂಡಿಯಲ್ಲಿ ಮುಖ ಮುಚ್ಚಿಕೊಂಡಳು. ಅಳುತ್ತಿದ್ದಾಳೆಂಬುದು ಅವಳ ದೇಹದ ಕುಲುಕಾಟದಿಂದಲೇ ಅನುಭವವಾಗಿ ವೆಂಕಟೇಶನ ಮನಸ್ಸು ಚುರುಗುಟ್ಟಿತು. ಅವಳ ಪಕ್ಕದಲ್ಲಿ ಕೂತು ಅವಳ ಭುಜ ಬಳಸಿದ ವೆಂಕಟೇಶ.

'ಅಳ್ಬೇಡ ಭಾಮ, ನೀನು ಕಣ್ಣೀರು ಹಾಕಿದ್ರೆ ನಂಗೆ ಸಹಿಸೋಕಾಗಲ್ಲ...' ಎನ್ನುವಾಗ ಅವನ ದನಿ ಗದ್ಗದಿಸಿತು. ಭಾಮ ತಲೆಯೆತ್ತಿ ಅವನ ಮುಖ ನೋಡಿದಳು. ಕಣ್ಣೀರಿನಿಂದ ತೋಯ್ದ ಅವಳ ಅಸಹಾಯಕ ಮುಖವನ್ನು ಅಷ್ಟು ಸನಿಹದಿಂದ ನೋಡಿ ವೆಂಕಟೇಶನ ಮನಸ್ಸು ಕರಗಿ ಹೋಯ್ತು. ಇವಳು ಯಾರೋ? ತಾನು ಯಾರೋ? ಪ್ರೀತಿ ಎನ್ನುವುದು ತಮ್ಮಿಬ್ಬರನ್ನು ಬೆಸೆದು ಸಮೀಪವರ್ತಿಗಳನ್ನಾಗಿಸಿದೆ. ಮದುವೆ ಅಂದರೆ ಹೆಣ್ಣಿಗೆ ಮಾತ್ರ ಆತಂಕ, ಹೊಸ ಜಾಗದಲ್ಲಿ ಬೇರೂರಬೇಕಾದ ಅನಿವಾರ್ಯ ಅನ್ನುವ ಹೇಳಿಕೆಯಲ್ಲಿ ಎಷ್ಟೇ ಸತ್ಯವಿರಲಿ, ಗಂಡಿಗೂ ಇರುತ್ತದೆ ಭಯ. ಗಂಡಿಗೂ ಇರುತ್ತದೆ ಆತಂಕ. ಮುಂದೆ ಸಂಸಾರದ ಜವಾಬ್ದಾರಿ ಹೊರಬೇಕಾಗುತ್ತದೆ ಎನ್ನುವ ಅಸ್ಪಷ್ಟ ಭೀತಿ. ಜೊತೆಜೊತೆಯಲ್ಲಿ ಇನ್ನು ಇವಳನ್ನು ಕಾಪಾಡಬೇಕಾದವನು ತಾನು ಎನ್ನುವ ಅಹಂ. ಈ ಅಹಂ ಅನ್ನುವುದು ಜಾಗೃತವಾಯಿತೇನೋ ಎನ್ನುವಂತೆ ವೆಂಕಟೇಶ ಅವಳ ಕೈಗಳನ್ನು ತನ್ನ ಕೈ ಮುಷ್ಟಿಯಲ್ಲಿ ಹಿಡಿದು ಬಿಗಿದ.

'ಮಾತು ಕೊಡ್ತೀನಿ ಭಾಮ. ಕೂಲಿ ಮಾಡಿಯಾದ್ರೂ ನಿನ್ನ ಸಾಕ್ತೀನಿ. ಯಾವತ್ತೂ ನಿನ್ನ ಕೈ ಬಿಡಲ್ಲ. ಸರೀನಾ?' ಅಂದ.

ಅಳುಮೊಗದಲ್ಲೇ ಅವಳು ನಕ್ಕಳು. 'ನಿನ್ನಿಂದ ನಾನು ನಿರೀಕ್ಷೆ ಮಾಡೋದು ಇದನ್ನೇ ಕಣೋ...' ಎನ್ನುತ್ತಾ ಅವನ ತೊಡೆಯಲ್ಲಿ ಮುಖ ಹುದುಗಿಸಿದಳು. ವೆಂಕಟೇಶ ಅವಳ ತಲೆ ನೇವರಿಸಿದ. ಇದು ಈ ಜನ್ಮದ ಸಂಬಂಧ ಅಲ್ಲ, ಜನ್ಮಜನ್ಮಾಂತರದ್ದು ಎನ್ನುವಂಥ ಭಾವನೆಯೊಂದು ಮನಸ್ಸಿನಲ್ಲಿ ಸ್ಫುರಿಸಿತು. ಮರುದಿನವೇ ಅವನು ಊರಿಗೆ ಹೋಗಿ ಹೆತ್ತವರೊಡನೆ ಮಾತಾಡುವುದು, ಮತ್ತು ಮುಂದಿನವಾರ ಇದೇ ದಿನ, ಇದೇ ಹೊತ್ತಲ್ಲಿ ಭೇಟಿ ಎನ್ನು ತೀರ್ಮಾನದೊಂದಿಗೆ ಭಾಮ ಪ್ರಿಯತಮನಿಂದ ಬೀಳ್ಕೊಂಡಳು.

* * *

ವೆಂಕಟೇಶನ ಮನೆಯಲ್ಲಿ ಮಗನ ನಿರ್ಧಾರಕ್ಕೆ ಪ್ರಬಲ ಪ್ರತಿರೋಧ ಬರಲಿಲ್ಲ. ಈಗಾಗಲೇ ಮಗಳನ್ನು, ಮೊಮ್ಮಗನನ್ನು ಕಳೆದುಕೊಂಡಿದ್ದ ಕುಟುಂಬ ಈ ಕಾರಣದಿಂದ ಕೈಗೆ ಬಂದ ಮಗನನ್ನು ಕಳೆದುಕೊಳ್ಳಲು ಸಿದ್ಧವಿರಲಿಲ್ಲ. ಆ ಮನೆಯಲ್ಲಿ ವೆಂಕಟೇಶನ ಒಡಹುಟ್ಟಿದವರು ಮತ್ತೂ ಇಬ್ಬರಿದ್ದರು. ಒಬ್ಬ ತಂಗಿ ಮತ್ತು ಒಬ್ಬ ತಮ್ಮ. ಈ ವಯಸ್ಸಿನಲ್ಲೇ ಮಗ ಪ್ರೀತಿ, ಪ್ರೇಮ ಎನ್ನುವ ಮಾತಾಡುತ್ತಿರುವುದು ಹೆತ್ತವರಿಗೆ ಬಿಸಿತುಪ್ಪವಾಗಿದ್ದರೂ ಅನಿವಾರ್ಯವಾಗಿ ನುಂಗಿಕೊಂಡಿದ್ದರು.

'ಆಯ್ತು, ನಿನ್ನಿಷ್ಟದ ಹಾಗೆ ಮದುವೆ ಆಗು. ಆದರೆ ಇಷ್ಟು ಬೇಗ ಬೇಡ. ಬದುಕೋಕೆ ಒಂದು ದಾರಿ ಮಾಡ್ಕೊಂಡ ಮೇಲೆ ಮತ್ತೆಲ್ಲಾ...' ಎನ್ನುವ ಹಿತವಚನ ಅವರಿಂದ ಬಂದಿತ್ತು. ವೆಂಕಟೇಶ ಪರಿಸ್ಥಿತಿಯನ್ನು ವಿವರಿಸಿದ್ದ. ತಡ ಮಾಡಿದಷ್ಟೂ ಭಾಮನಿಗೆ ಕಷ್ಟವಾಗುತ್ತದೆ ಎಂಬುದನ್ನು ಮನದಟ್ಟು ಮಾಡಿಸಿದ್ದ. ಭಾಮನ ಹಿನ್ನೆಲೆ ತಿಳಿದ ವೆಂಕಟೇಶನ ಅಪ್ಪನಿಗೆ ವಿಪರೀತದ ಭಯ.

'ದೊಡ್ಡ ಕೆಲಸದಲ್ಲಿರೋರು. ದುಡ್ಡಿನ ಜನ. ಹಟ ಇಟ್ಕೊಂಡು ನಾಳೆ ನಿಂಗೇನಾದ್ರೂ ಮಾಡಿದ್ರೆ ನಮ್ಮ